1036(1026) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈ ಸಾಲಿನ (2004.05ನೇ) ವಿವಿಧ ಸಮಿತಿಗಳಾದ ಆಶ್ರಯ, ಆರಾಧನಾ, ಅಕ್ರಮ-ಸಕ್ರಮ, ಭೂ ನ್ಯಾಯಮಂಡಳಿಸಮಿತಿಗಳನ್ನು ರಚಿಸಿ ಅನುಷ್ಟಾನ ಗೊಳಿಸಿದೆಯೇ ;

ಆ) ಇವುಗಳಿಗೆ ಸದಸ್ಯರನ್ನು ನೇಮಕಗೊಳಿಸಲಾಗಿದೆಯೇ ;

ಇ) ಇದುವರೆಗೆ ಸಮಿತಿಗಳನ್ನು ರಚನೆಮಾಡದಿದ್ದಲ್ಲಿ ಕಾರಣಗಳೇನು ಹಾಗೂ ಯಾವಾಗ ರಚಿಸಲಾಗುವುದು;

ಈ) ಸದರಿ ಸಮಿತಿಗಳಿಗೆ ನೇಮಕ ಮಾಡುವ ಸದಸ್ಯರಿಗೆ ಕನಿಷ್ಟ ಅರ್ಹತೆ ಮಾನದಂಡಗಳನ್ನು ನಿಗಧಿಪಡಿಸಲಾಗಿದೆಯೇ ; ಇಲ್ಲವಾದಲ್ಲಿ ಕಾರಣಗಳೇನು ?

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 48ರ ಪ್ರಕಾರ ಈಗಾಗಲೇ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಭೂ ನ್ಯಾಯ ಮಂಡಳಿಗಳನ್ನು ರಚಿಸಿ ಅನುಷ್ಟಾನಗೊಳಿಸಲಾಗಿದೆ. ಈ ಭೂ ನ್ಯಾಯ ಮಂಡಳಿಗಳಿಗೆ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದು ಇವರೊಂದಿಗೆ ನಾಲ್ಕು ಜನ ಅಧಿಕಾರೇತರ ಸದಸ್ಯರಿರುತ್ತಾರೆ. ಪ್ರಸ್ತುತ 2004.05ನೇ ಸಾಲಿಗೆ ಹಾಲಿ ಅಧಿಕಾರೇತರ ಸದಸ್ಯರ ಬದಲಿಗೆ ಹೊಸ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ಬಗ್ಗೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ವಸತಿ ಇಲಾಖೆಯ ಸುತ್ತೋಲೆ ಸಂಖ್ಯೆ ವ.ಇ.74 ಹೆಚ್.ಎ.ವೈ04 ದಿನಾಂಕ 20.11.04 ರಂತೆ ವಸತಿ ಇಳಾಖೆಯ ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ವಸತಿ ಕಾರ್ಯಕ್ರಮಗಳ ಅನುಷ್ಟಾನದ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಇದರನ್ವಯ ಆಶ್ರಯ ಯೋಜನೆ ಹಾಗೂ ಇತರ ಫಲಾನುಭವಿಗಳ ಆಧಾರಿತ ಯೋಜನೆಯ ಆಯ್ಕೆಯನ್ನು ಗ್ರಾಮಪಂಚಾಯ್ತಿಗಳು ಗ್ರಾಮಸಭೆಗಳ ಮೂಲಕ ಮಾಡಬೇಕಾಗುತ್ತದೆ. ಆದಕಾರಣ ಕಾನೂನು ಬದ್ಧವಾಗಿ ಆಶ್ರಯ ಸಮಿತಿಗಳನ್ನು ಪುನರ್ ರಚಿಸುವ ಅಗತ್ಯವಿರುವುದಿಲ್ಲ.

ಆರಾಧನಾ ಸಮಿತಿಗೆ ವಿಧಾನಸಭಾ ಕ್ಷೇತ್ರವಾರು ಅನುದಾನ ಒದಗಿಸಲಾಗುತ್ತದೆ. ಈ ಸಮಿತಿಗೆ ಸ್ಥಳೀಯ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಆರಾಧನಾ ಸಮಿತಿಗಳನ್ನು ಪುನರ್ ರಚಿಸಲು ಪ್ರಸ್ತಾವನೆಗಳನ್ನು ಪಡೆಯಲಾಗುತ್ತಿದೆ. ಈಗಾಗಲೇ ಪ್ರಸ್ತಾವನೆಗಳು ಬಂದಿದ್ದು, ಇನ್ನೂ ಕೆಲವು ಸಮಿತಿಗಳ ಪುನರ್ರಚನೆ ಕುರಿತು ಪ್ರಸ್ತಾವನೆಗಳು ಬಂದಿದ್ದು, ಇನ್ನೂ ಕೆಲವು ಸಮಿತಿಗಳ ಪುನರ್ ರಚನೆ ಕುರಿತು ಪ್ರಸ್ತಾವನೆಗಳು ಜಿಲ್ಲಾಧಿಕಾರಿಗಳಿಂದ ಬರಬೇಕಾಗಿದೆ. ಆರಾಧನಾ ಸಮಿತಿಗಳನ್ನು ಪುನರ್ ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಕ್ರಮ ಸಾಗುವಳಿ ಸಕ್ರಮಿಕರಣ ಕೋರಿ ನಮೂನೆ 50 ಮತ್ತು 53ರ ಅರ್ಜಿಗಳು ರಾಜ್ಯಾದ್ಯಂತ ಬಾಕಿ ಇರುವುದರಿಂದ ಅವುಗಳನ್ನು ತಾಲ್ಲೂಕು ಮಟ್ಟದ ಬಗರ್ ಹುಕ್ಕುಂ ಸಮಿತಿಯಲ್ಲಿ ಮಂಡಿಸಿ ಇತ್ಯರ್ಥಪಡಿಸಲು ಅನುವಾಗಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಬಿ ಗೆ ತಿದ್ದುಪಡಿ ತಂದು ದಿನಾಂಕ : 26.4.2005ರ ಅವಧಿಗೆ ಗಡುವನ್ನು ವಿಸ್ತರಿಸಲಾಗಿದೆ. ಲೋಕಸಭೆ

ಮತ್ತು ವಿಧಾನಸಭೆ ಸರ್ಜಿತಗೊಂಡ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದ ಕಾರಣ ಸದರಿ ತಾಲ್ಲೂಕು ಮಟ್ಟದಲ್ಲಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಮಿತಿಯ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಹೊಸ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 36 ಎಲ್‌ಜಿಪಿ 2004ರ ದಿ:3.9.2004ರ ರಾಜ್ಯದಲ್ಲಿನ ಈ ಹಿಂದೆ ತಾಲ್ಲೂಕು ಮಟ್ಟದಲ್ಲಿನ ಎಲ್ಲಾ ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ಪುನರ್ ರಚಿಸಿ ಹೊರಡಿಸಿದ ಎಲ್ಲಾ ಅಧಿಸೂಚನೆಗಳನ್ನು ಹಿಂತೆಗೆದು ಆದೇಶಿಸುತ್ತಾ, ಬಗರ್ ಹುಕುಂ ಸಮಿತಿಗಳನ್ನು ರಚಿಸಲು ಹೊಸ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಗಳು ಬಂದಿದ್ದು ಅವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಅ) ಭಾಗದಲ್ಲಿ ಉತ್ತರಿಸಲಾಗಿದೆ.

ಇ) ಚುನಾವಣೆಗಳನ್ನು ಘೋಷಿಸಿದ್ದರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಹಿಂದೆ ರಚಿಸಲಾಗಿದ್ದ ಅಕ್ರಮ-ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ಸ್ಥಗಿತಗೊಳಿಸಲಾಗಿತ್ತು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅಕ್ರಮ-ಸಕ್ರಮ ಹಾಗೂ ಆರಾಧನಾ ಸಮಿತಿಗಳನ್ನು ರಚನೆಮಾಡುವ ಸಂಭಂಧ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲು ಕ್ರಮ ಮೈಗೊಳ್ಳಲಾಗಿದೆ. ಕೆಲವು ಪ್ರಸ್ತಾವನೆಗಳು ಈಗಾಗಲೇ ಬಂದಿದ್ದು ಇನ್ನೂ ಕೆಲವು ಪ್ರಸ್ತಾವನೆಗಳು ಬರಬೇಕಾಗಿದೆ. ಶೀಘ್ರವಾಗಿ ರಚಿಸಲಾಗುವುದು.

ಈ) ಆರಾಧನಾ ಸಮಿತಿಗಳನ್ನು ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ರಚಿಸಲಾಗಿರುತ್ತದೆ. ಕ್ಷೇತ್ರದ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಅಧ್ಯಕ್ಷರನ್ನು ಸೇರಿಸಿ ಸಮಿತಿಯಲ್ಲಿ 8 ಜನರು ಇರುತ್ತಾರೆ. ಅಧಿಕಾರೇತರ 4 ಸದಸ್ಯರು ಹಾಗೂ 4 ಜನ ಅಧಿಕಾರಿಗಳು ಇರುತ್ತಾರೆ. ಅಧಿಕಾರೇತರ ಸದಸ್ಯರಲ್ಲಿ ಮಹಿಳೆ, ಪರಿಶಿಷ್ಟಜಾತಿ: ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ವರ್ಗದವರು ತಲಾ ಒಬ್ಬರು ಸದಸ್ಯರಿರುತ್ತಾರೆ.

ಅಕ್ರಮ ಸಕ್ರಮ ಸಮಿತಿಯಲ್ಲಿ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 108ಇ ರನ್ವಯ ತಾಲ್ಲೂಕಿನ ಬಹುಭಾಗ ಪ್ರತಿನಿಧಿಸುವ ಚುನಾಯಿತ ವಿಧಾನ ಸಭೆ ಸದಸ್ಯರನ್ನು ಅಧ್ಯಕ್ಷರನ್ನಾಗಿ ತಾಲ್ಲೂಕಿನ ತಹಸೀಲ್ದಾರರನ್ನು ಸಮಿತಿಯ ಕಾರ್ಯದರ್ಶಿಯಾಗಿ ಇತರೆ 3 ಅಧಿಕಾರೇರತರ ಸದಸ್ಯರಲ್ಲಿ ಒಬ್ಬರು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬ್ಬರು ಮಹಿಳಾ ಸದಸ್ಯರಿರುತ್ತಾರೆ. ತಾಲ್ಲೂಕಿನಲ್ಲಿ ಅರ್ಜಿಗಳು ಹೆಚ್ಚಾಗಿದ್ದಲ್ಲಿ ನಿಯಮಾವಳಿ 108ಇ ರನ್ವಯ ಹೆಚ್ಚುವರಿ ಸಮಿತಿಯನ್ನು ಉಪ ವಿಭಾಗಾಧಿಕಾರಿಯನ್ನು ಅಧ್ಯಕ್ಷರನ್ನಾಗಿ ಸಂಬಂಧಿಸಿದ ತಹಸೀಲ್ದಾರರನ್ನು ಕಾರ್ಯದರ್ಶಿಯನ್ನಾಗಿ ಒಬ್ಬರು ಮಹಿಳಾ, ಒಬ್ಬರು ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಸದಸ್ಯರಾಗಿ ಒಬ್ಬರು ಸಾಮಾನ್ಯ ಸದಸ್ಯರನ್ನೊಳಗೊಂಡಂತೆ ರಚಿಸಲಾಗುತ್ತಿದೆ.

1042(1025) ಶ್ರೀ ಸಂಗಮೇಶ್ವರ ಬಿ.ಕೆ(ಭದ್ರಾವತಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭದ್ರಾಜಲಾಶಯ ಮತ್ತು ಗೊಂದಿ ಡ್ಯಾಂಗಳಲ್ಲಿ ಹೂಳು ತುಂಬಿರುವುದರಿಂದ ಜಲಾಶಯದ ಡ್ಯಾಂನ ನೀರು ಸಂಗ್ರಹಣಾ ಸಾಮರ್ಥ್ಯ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ: